ಉಡುಪಿ ಜಿಲ್ಲೆಯಲ್ಲಿ ವಿದ್ಯುತ್ ಕಡಿತ

326 (562) ಶ್ರೀ.ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲ್ಲಿ ದಿನಕ್ಕೆ ಎಷ್ಟು ಗಂಟೆ ವಿದ್ಯುತ್ ಕಡಿತ ಮಾಡಲಾಗುವುದು,

ಆ) ಈ ರೀತಿ ವಿದ್ಯುತ್ ಕಡಿತದಿಂದ ಶಾಲಾಮಕ್ಕಳಿಗೆ, ವ್ಯಾಪಾರಸ್ಥರಿಗೆ, ಸಣ್ಣಕೈಗಾರಿಕೆಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದ ಇತರ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿರುವಂತೆ ಉಡುಪಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲೂ 6 ಗಂಟೆ ಅವಧಿಯನಿಯ ಮಿತಿ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸ ಲಾಗುತ್ತಿದೆ. ಬೇಸಿಗೆ ಪ್ರಾರಂಭವಾಗಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಐ.ಪಿ.ಸೆಟ್‌ಗಳ ಬಳಕೆ ಬಹಳ ಹೆಚ್ಚುತ್ತಿರುವುದರಿಂದ ರಾಜ್ಯದ ವಿದ್ಯುತ್ ಬೇಡಿಕೆಯ ಪ್ರಮಾಣ ಬಹಳಷ್ಟು ಹೆಚ್ಚಳಗೊಂಡಿದೆ. ರಾಜ್ಯದ ವಿದ್ಯು ತ್ ಬೇಡಿಕೆ ಮತ್ತು ಲಭ್ಯತೆಗೆ ಅನುಗುಣವಾಗಿ ವಿದ್ಯುತ್ ಲೋಡ್‌ನ್ನು ನಿಯಂತ್ರಿಸಲು ರಾಜ್ಯದಲ್ಲಿ ಉಡುಪಿ ಜಿಲ್ಲೆಯೂ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ಪ್ರತೀ ದಿನ ಅನಿಯಮಿತ ಲೋಡ್ ಷೆಡ್ಡಿಂಗನ್ನು ಸಹ ನಿರ್ವಹಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ.

ಆ) ಹೌದು, ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಾರ್ವಜನಿಕರು, ಕೃಷಿಕರು ಮತ್ತು ವ್ಯಾಪಾರೋದ್ಯಮಿಗಳು ಮಂಡಳಿಯೊಡನೆ ಸಹಕರಿಸಬೇಕಾಗಿದೆ. ಏಪ್ರಿಲ್'99 ರ ಮಧ್ಯಭಾಗದ ನಂತರ ನೀರಾವರಿ ಪಂಪುಸೆಟ್ಟುಗಳ ಬಳಕೆ ಕಡಿಮೆಗೊಳ್ಳುವುದರಿಂದ , ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗುವ ನಿರೀಕ್ಷೆ ಇದೆ.

ಇ) ರಾಜ್ಯದ ವಿದ್ಯುತ್ ಸರಬರಾಜಿನ ಪರಿಸ್ಥಿತಿಯನ್ನು ಸುಧಾರಿಸಲು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಖಾಸಗಿವಲಯದಲ್ಲಿ ಸ್ಥಾಪಿಸಲು ಕರ್ನಾಟಕ ರಾಜ್ಯ ಸರ್ಕಾರವು ಅನುಮೋದನೆ ಯನ್ನು ನೀಡಿದೆ. ಈ ವಿದ್ಯುತ್ ಯೋಜನೆಗಳ ಪ್ರಗತಿಯ ವಿವಿಧ ಹಂತಗಳಲ್ಲಿವೆ ಮುಂಬರುವ 3 ರಿಂದ 4 ತಿಂಗಳ ಅವಧಿಯಲ್ಲಿ ಕರ್ನಾಟಕ ವಿದ್ಯುತ್‌ನಿಗಮವು ಒಟ್ಟು 600 ಮೆ.ವಾಟ್‌ಗಳ ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೇರ್ಪಡೆಗೊಳಿಸುವ ಸಾಧ್ಯತೆ ಇದ್ದು, ವಿದ್ಯುತ್ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗಲಿದೆ. ಅಲ್ಲದೇ, ಉಡುಪಿ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯನ್ನು ಸುಧಾರಿಸಲು ಅನೇಕ ವ್ಯವಸ್ಥೆ ಸುಧಾರಣಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. 1998-99ನೇ ಸಾಲಿನಲ್ಲಿ ಈ ಕೆಳಕಂಡ ವಿದ್ಯುತ್ ಕೇಂದ್ರಗಳನ್ನು ಚಾಲನೆಗೊಳಿಸಲಾಗಿದೆ.

1. ಕೇಮಾರ್ 1 : 100 ಎಂವಿಎ, 220: 110: 11 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ.

2. ಹಾಲಾಡಿ 1 : 10 ಎಂವಿಎ, 110: 11 ಕೆವಿ ವಿದ್ಯುತ್ ವಿತರಣಾ ಕೇಂದ್ರ.

3. ತಳ್ಳೂರು 1 : 5 ಎಂವಿಎ, 33: 11 ಕೆವಿ ವಿದ್ಯುತ್ ವಿತರಣಾ ಕೇಂದ್ರ.

ಅಲ್ಲದೇ, ಸದರಿ ಜಿಲ್ಲೆಯು ಈ ಕೆಳಕಂಡ ಸ್ಥಳಗಳಲ್ಲಿವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಗಳು ಪ್ರಗತಿಯಲ್ಲಿದ್ದು, ಇವುಗಳನ್ನು 99-2000ನೇ ಸಾಲಿನಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.

1. ನಿಟ್ಟೂರು 2 : 10 ಎಂವಿಎ, 110 : 11 ಕೆವಿ ವಿದ್ಯುತ್ ವಿತರಣಾ ಕೇಂದ್ರ.

2. ಹೆಬ್ರಿ 1 : 5 ಎಂವಿ, 33 : 11 ಕೆವಿ ವಿದ್ಯುತ್ ವಿತರಣಾ ಕೇಂದ್ರ.

ರಾಜ್ಯದಲ್ಲಿ ಪತ್ತೆಹಚ್ಚಲಾದ ಮಾದಕ ದ್ರವ್ಯಗಳ ಬಗ್ಗೆ

327 (564) ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1997-98, 1998-99ರ ಜನವರಿ 31ರವರೆಗೆ ರಾಜ್ಯದಲ್ಲಿ ಎಷ್ಟು ಮೊತ್ತದ ಮಾದಕ ದ್ರವ್ಯಗಳನ್ನು ಪತ್ತೆ ಹಚ್ಚಲಾಗಿದೆ.

ಆ) ಪತ್ತೆ ಹಚ್ಚಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಅವುಗಳ ಪೈಕಿ ಬಂದಿಸಲ್ಪಟ್ಟವರ ಸಂಖ್ಯೆ ಎಷ್ಟು?

ಈ) ಮೇಲಿನ ಮೊಕದ್ದಮೆಗಳಲ್ಲಿ ವಶಪಡಿಸಿಕೊಂಡ ವಾಹನಗಳ ಸಂಖ್ಯೆಎಷ್ಟು? ಇವುಗಳ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಸಂಖ್ಯೆ ಎಷ್ಟು? ಬಿಡುಗಡೆಗೊಳಿಸಿದ ವಾಹನಗಳ ಸಂಖ್ಯೆ ಎಷ್ಟು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

ಅ) 1997-98, 1998-99ರ ಜನವರಿ 31ರವರೆಗೆ ಪತ್ತೆ ಹಚ್ಚಲಾದ ಮಾದಕ ದ್ರವ್ಯಗಳ ಒಟ್ಟು ಅಂದಾಜು ಮೊತ್ತರೂ. 1,42,100 ಆಗಿರುತ್ತದೆ.

ಆ) 26 ಮೊಕದ್ದಮೆಗಳು (ಜಿಲ್ಲಾವಾರು ಮಾಹಿತಿ ಮೊಕದ್ದಮೆಗಳು ಈ ಕೆಳಕಂಡಂತಿದೆ)

1)	ಬೆಂಗಳೂರು (ನಗರ)	- 2
2)	ಬೆಂಗಳೂರು(ಗ್ರಾ)	- 1
3)	ಬೆಳಗಾಂ	- 3
4)	ಬೀದರ್	- 3
5)	ಚಿತ್ರದುರ್ಗ	- 2
6)	ಚಾಮರಾಜನಗರ	- 5